'ಸಿಂಗಲ್ ಮದರ್ ಎನ್ನುವುದು ಮಿತಿಯಲ್ಲ, ಶಕ್ತಿ...' ಅಮೆರಿಕದ ಸೆಲೆಬ್ರಿಟಿ ಪ್ರಚಾರಕಿ, ಬಿಸಿನೆಸ್ ವುಮೆನ್, 35 ವರ್ಷದ ಕಿಕಿ ಆಯರ್ಸ್ ಈಚೆಗೆ ಸಂದರ್ಶನವೊಂದರಲ್ಲಿ ಹೇಳಿದ ಮಾತಿದು.

ತಮ್ಮದೇ ಅನುಭವವನ್ನು ತೆರೆದಿಡುತ್ತಾ, ತಾವು ಒಬ್ಬಂಟಿಯಾಗಿ ಮಗುವನ್ನು ಬೆಳೆಸಿದ ಖುಷಿ, ಒದ್ದಾಟ, ಸವಾಲುಗಳನ್ನು ಬೆರಗಿನಿಂದ ಹಂಚಿಕೊಳ್ಳುತ್ತಲೇ, 'ಸಿಂಗಲ್ ಮಾಮ್' ಎಂಬ ಪದ ಕೇಳಿದಾಗಲೆಲ್ಲಾ ನನ್ನೊಳಗೆ ಮಿಂಚೊಂದು ಸುಳಿದಂತಾಗುತ್ತದೆ ಎಂದು ಕಿಕಿ ಆಯರ್ಸ್ ಹೆಮ್ಮೆಯಿಂದ ಹೇಳಿಕೊಂಡಿದ್ದರು. ತಾಯ್ತನವನ್ನು ಸ್ವತಂತ್ರವಾಗಿ, ಸಂಪೂರ್ಣವಾಗಿ ಅನುಭವಿಸುತ್ತಲೇ ಏಕಾಂಗಿಯಾಗಿ ವೃತ್ತಿಯನ್ನೂ ಕಟ್ಟಿಕೊಂಡ ತಮ್ಮ ಕಥೆಯನ್ನು ಆತ್ಮವಿಶ್ವಾಸದೊಂದಿಗೆ ಹಂಚಿಕೊಂಡಿದ್ದರು.

ಸಿಂಗಲ್ ಮದರ್, ಸಿಂಗಲ್ ಮಾಮ್, ಸಿಂಗಲ್ ಪೇರೆಂಟ್... ಅಮೆರಿಕ ಸೇರಿದಂತೆ ಪಾಶ್ಚಾತ್ಯ ದೇಶಗಳಲ್ಲಿ ಈ ಪರಿಕಲ್ಪನೆ ಹಲವು ದಶಕಗಳ ಸಾಮಾಜಿಕ ಬದುಕಿನ ಭಾಗವೇ ಆಗಿದೆ. ಏಕಾಂಗಿಯಾಗಿ ಮಗುವನ್ನು/ ಮಕ್ಕಳನ್ನು ಪೋಷಿಸುವ, ಸಾಕುವ ತಾಯಂದಿರ ಸಂಖ್ಯೆ ಸಮಪಾಲೇ ಇದೆ.

ಆದರೆ ವಿದೇಶಗಳಲ್ಲಿ ಮಾತ್ರವಲ್ಲ, ಕೌಟುಂಬಿಕ ಚೌಕಟ್ಟಿನ ಭಾರತದಲ್ಲಿ ಕೂಡ 'ಸಿಂಗಲ್ ಮದರ್' ಪರಿಕಲ್ಪನೆ ಹಲವು ಆಯಾಮಗಳನ್ನು ಪಡೆದುಕೊಳ್ಳುತ್ತಾ ಸಾಗುತ್ತಿದೆ. ಬದಲಾದ ಕಾಲಘಟ್ಟದಲ್ಲಿ ಭಾರತೀಯ ಕೌಟುಂಬಿಕ, ವೈವಾಹಿಕ ರಚನೆಯಲ್ಲಾಗುತ್ತಿರುವ ಪಲ್ಲಟಗಳು ಮಾತೃತ್ವದ ಕುರಿತ ದೃಷ್ಟಿಕೋನವನ್ನೂ ಹಿಗ್ಗಿಸಿದೆ.





ಸೆಲೆಬ್ರಿಟಿ ಮದರ್

## ಮಡೋನಾ

'ಪಾಪ್ ಐಕಾನ್', 'ಕ್ವೀನ್ ಆಫ್ ಪಾಪ್' ಎಂದೇ ಕರೆಯಲಾಗುವ ಅಮೆರಿಕದ ಜನಪ್ರಿಯ ಪಾಪ್ ಗಾಯಕಿ, ನಟಿ ಮಡೋನಾ ಲೂಯಿಸ್ ಸಿಕ್ಕೋನ್ ಆರು ಮಕ್ಕಳನ್ನು ಒಂಟಿಯಾಗಿ ಬೆಳೆಸಿದವರು.

ಒಂದೇ ವರ್ಷಕ್ಕೆ ಪತಿ ಜೊತೆ ಸಂಬಂಧ ಕಡಿದುಕೊಂಡು ಮಗಳಿಗೆ ಜನ್ಮವಿತ್ತ ಸಂದರ್ಭದಲ್ಲಿ ಒಬ್ಬಂಟಿ ಪೋಷಕಿಯಾಗುವ ಹೊಣೆ ಬಯಸದೇ ಬಂದಿತ್ತು. ಒಂಟಿಯಾಗಿ ಮಗುವನ್ನು ಸಾಕುವ ಸವಾಲನ್ನು ಎದುರಿಸುವುದರೊಂದಿಗೆ ತನ್ನ ಮಗಳಿಗೆ ತನ್ನಿಂದ ಸಾಧ್ಯವಾಗುವ ಉತ್ತಮ ಜೀವನ ಕೊಡಲು ನಿಶ್ಚಯಿಸಿ ತಮ್ಮ ಸಂಗೀತದ ಹಾದಿಯನ್ನು ಮುಂದುವರೆಸಿದರು, ಹಗಲು ರಾತ್ರಿಯೆನ್ನದೇ ವೃತ್ತಿಯಲ್ಲಿ ತೊಡಗಿಕೊಂಡರು.

ಮರುಮದುವೆಯಾಗಿ ಗಂಡು ಮಗುವಿಗೆ ಜನ್ಮ ನೀಡಿದರೂ ಆ ಸಂಬಂಧ ದೀರ್ಘಕಾಲ ಉಳಿಯಲಿಲ್ಲ. ಸಮಾಜ ಸೇವೆಯಲ್ಲಿಯೂ ತೊಡಗಿಕೊಂಡಿದ್ದ ಮಡೋನಾ ಕೆಲವೇ ವರ್ಷಗಳಲ್ಲಿ ಇಬ್ಬರು ಮಕ್ಕಳನ್ನು ದತ್ತು ತೆಗೆದುಕೊಂಡರು.

'ಈ ವಿಷಯದಲ್ಲಿ ಸುಳ್ಳು ಹೇಳಲು ಸಾಧ್ಯವಿಲ್ಲ, ಮಕ್ಕಳನ್ನು ಒಂಟಿಯಾಗಿ ಸಾಕುವುದು ಸುಲಭವಾಗಿರಲಿಲ್ಲ. ತುಂಬಾ ಕಷ್ಟಪಟ್ಟೆ. ನಾಲ್ಕು ಮಕ್ಕಳ ನಡುವೆ ತಲೆ ಸಿಡಿದುಹೋಗುವ ಹಾಗೆ ಅನ್ನಿಸುತ್ತಿತ್ತು. ಕೆಲವೊಮ್ಮೆ ಸುಖ, ಕೆಲವೊಮ್ಮೆ ಒದ್ದಾಟ. ಆದರೆ ಇವೆಲ್ಲವೂ ತಾಯಿಯ ಅನುಭವವೇ ಅಲ್ಲವೇ' ಎಂದು ಹೇಳಿದ್ದ ಮಡೋನಾ, ಕೆಲವೇ ವರ್ಷಗಳಲ್ಲಿ ಮಲಾವಿ ಮೂಲದ ಅವಳಿ ಜವಳಿ ಮಕ್ಕಳನ್ನೂ ದತ್ತು ತೆಗೆದುಕೊಂಡರು. ಒಟ್ಟು ಆರು ಮಕ್ಕಳನ್ನು ತಮ್ಮ ಮಡಿಲಲ್ಲಿ ಪೋಷಿಸಿದರು.

ಮಕ್ಕಳಿಗೆ ಪರಿಶ್ರಮ, ದೃಢತೆ ಹಾಗೂ ಯಾವುದೇ ವೇದಿಕೆಯನ್ನು ಧನಾತ್ಮಕ ಬದಲಾವಣೆಗೆ ಬಳಸಿಕೊಳ್ಳುವ ಗುಣವನ್ನು ಕಲಿಸುವುದೇ ನನ್ನ ಗುರಿ ಎಂದು ಹೇಳಿದ್ದ ಅವರು, ಒಂಟಿ ತಾಯಂದಿರ ಸವಾಲುಗಳ ಕುರಿತ ತಮ್ಮ ಅನುಭವವನ್ನೇ ಪೋಣಿಸಿ ಒಂದು ಹಾಡನ್ನು ರಚಿಸಿ ಹಾಡಿದ್ದರು.